# ಕಾಪು ದಾಸ್ತಾನಿಗಾಗಿ ರೈತರಿಂದ 15000 ಟನ್ ನೀರುಳ್ಳಿ ಖರೀದಿಸಲಿರುವ ಸರಕಾರ

ದರ ಹೆಚ್ಚಳದ ಸಮಯದಲ್ಲಿ ಉಪಯೋಗಿಸಲು ಸರಕಾರ ರೈತರಿಂದ 15000 ಟನ್ ನೀರುಳ್ಳಿ ಮುಂದಿನ ತಿಂಗಳಿಂದ ಖರೀದಿಸಲಿದೆಯೆಂದು ಗ್ರಾಹಕ ವ್ಯವಹಾರದ ಕಾರ್ಯದರ್ಶಿ ಸಿ ವಿಶ್ವನಾಥ ಅವರು ಹೇಳಿದರೆನ್ನಲಾಗಿದ್ದು, ಮಹಾರಾಷ್ಟ್ರದ ಲಾಸಲ್‌ಗಾಂವ್‌ನಿಂದ ಖರೀದಿಸಿ ಅಲ್ಲೇ ದಾಸ್ತಾನಿಡಲಾಗುವುದೆಂದು ಅವರು ಹೇಳಿದರೆನ್ನಲಾಗಿದೆ. ಸರಕಾರ ಬೆಲೆ ಸ್ಥಿರೀಕರಣ ನಿಧಿಯುನ್ನು ಇದಕ್ಕೆ ಬಳಸಲಾಗುವುದೆನ್ನಲಾಗಿದೆ. ನೀರುಳ್ಳಿ ದರ ಹೆಚ್ಚಳವಾದಾಗ ಪ್ರಮುಖವಾಗಿ 2016ರ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿಯುಲ್ಲಿ ಇದನ್ನು ಮಾರುಕಟ್ಟೆಗೆ ಬಿಡಲಾಗುವುದೆನ್ನಲಾಗಿದೆ.

ದೇಶದಾದ್ಯಂತ ಮಂಡಿಗಳಲ್ಲಿ ಖಾರಿಫ್ ಬೆಳೆಯ ನೀರುಳ್ಳಿ ಆವಕ ಹೆಚ್ಚಳವಾದ್ದರಿಂದ ದರ ಇಳಿಕೆಯಾದುದರಿಂದ ನೀರುಳ್ಳಿ ಕನಿಷ್ಠ ರಫ್ತು ದರ ಡಿಸೆಂಬರ್ 2015ರಲ್ಲಿ ಹಿಂದೆಗೆಯಲಾಗಿತ್ತು. ಈ ವರ್ಷ 2015–16ರಲ್ಲಿ ನೀರುಳ್ಳಿ ಉತ್ಪಾದನೆ ಹಿಂದಿನ ವರ್ಷ ಉತ್ಪಾದಿಸಲಾದ 18.92 ಮಿಲಿಯನ್ ಟನ್‌ಗಳಿಂದ 20.33 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಿದೆಯೆಂದು ರಾಜ್ಯ ಕೃಷಿ ಸಚಿವ ಮೋಹನ್‌ಬಾಯಿ ಕುಂದಾರಿಯಾ ಲೋಕ ಸಭೆಗೆ ತಿಳಿಸಿದರೆನ್ನಲಾಗಿದೆ.

ಬೆಲೆ ಸ್ಥಿರೀಕರಣ ನಿಧಿಗೆ ರೂ.900 ಕೋಟಿ

ಕೇಂದ್ರ ಅರ್ಥ ಸಚಿವ ಅರುಣ್ ಜೇಟ್ಲಿಯವರು 2016–17ನೇ ಸಾಲಿನ ನಿಧಿಗೆ ರೂ.900 ಹಂಚಿಕೆ ಮಾಡಿದ್ದಾರೆನ್ನಲಾಗಿದೆ.